# ನಕ್ಕುಬಿಡಿ



### ಸೀರೆ ಆರಿಸಿ

ಪತ್ನಿ: 'ರೀ, ನನಗೆ ಸೀರೆ ನೀವೇ ಆರಿಸಿ...

ಪತಿ: ನೀನೇ ಸೆಲೆಕ್ಟ್ ಮಾಡೇ, ಉಡೋಳು ನೀನೇ ತಾನೇ?

ಪತ್ನಿ: ಬೇಡ, ನೀವೇ ಆರಿಸಿ ಒಗೆಯೋರು ನೀವೇ ತಾನೇ?

### ಸಂಖ್ಯೆ

ನಟಿ ಕೋಪ ಬಂದಿತ್ತು...

ನಟಿ: ನಾನು ನನ್ನ ಪಿ.ಎ.ನನ್ನು ಬದಲಿಸಬೇಕೆಂದಿದ್ದೇನೆ.

ಸ್ನೇಹಿತೆ: ಏಕೆ, ಅಂಥಾದ್ದೇನು ಮಾಡಿದ?

ನಟಿ: ಮತ್ತೇನು..? ಮಾಧ್ಯಮಗಳಿಗೆ ನಾನು ಮದುವೆಯಾದ ಸಂಖ್ಯೆಗಳಿಗಿಂತ ಡೈವೋರ್ಸ್‌ಗಳ ಸಂಖ್ಯೆಯ ಬಗ್ಗೆಯಷ್ಟೇ ಹೆಚ್ಚು ಮಾಹಿತಿ ಕೊಟ್ಟಿದ್ದಾನೆ!

### ಮನೆ ಅಳಿಯ

ಅತ್ತೆ: 'ಕಳೆದ 8 ವರ್ಷಗಳಲ್ಲಿ ನನ್ನ ಅಳಿಯ ಒಂದೇ ಒಂದು ಬಾರಿ ನಮ್ಮ ಮನೆಗೆ ಬಂದಿದ್ದು'.

ಸೊಸೆ: 'ಹೌದೇ! ಯಾವಾಗ?'

ಅತ್ತೆ: 'ಮದುವೆಯಾದ ಕೂಡಲೇ ಬಂದವನು ಈವರೆಗೂ ಹೋಗಿಯೇ ಇಲ್ಲ!'

### ಶೂಟ್

ಮಿಲಿಟರಿ ನಿವೃತ್ತ ಮೇಜರ್ ಅವರ ಮನೆಯ ಎದುರು ಒಂದು ಫಲಕ ತೂಗುತ್ತಿತ್ತು. ಅದರಲ್ಲಿ ಹೀಗೆ ಬರೆಯಲಾಗಿತ್ತು; 'ನಮ್ಮ ಮನೆ ಬಾಗಿಲಿಗೆ ಬರುವ 12ನೇ ಸೇಲ್ಸ್‌ಮನ್ ಎದೆಗೆ ಶೂಟ್ ಮಾಡಲು ವ್ಯವಸ್ಥೆ ಮಾಡಿದ್ದೇನೆ, ಈಗಾಗಲೇ 11 ಜನ ಬಂದು ಹೋಗಿದ್ದಾರೆ'.

### ಜೋಗುಳ

ಸಂಬಂಧಿ: 'ನಿಮ್ಮ ಮಗು ಅತ್ತಾಗ ನೀವೇಕೆ ಜೋಗುಳ ಹಾಡಿ ಸುಮ್ಮನಿರಿಸುವುದಿಲ್ಲ?'

ತಾಯಿ: 'ನಾನು ಜೋಗುಳ ಹಾಡಿದಾಗಲೆಲ್ಲ ಅಕ್ಕಪಕ್ಕದವರು ಮನೆಗೆ ಬಂದು ಮಗು ಅಳೋದೇ ಚೆಂದ ಇತ್ತು ಅನ್ನಲಾರಂಭಿಸಿದರು!'

### ಯಾವ ಕಾಲ?

ಟೀಚರ್: ಗುಂಡಾ, ನಾನು ಸುಂದರಳಾಗಿದ್ದೇನೆ, ಇದು ಯಾವ ಕಾಲ?

ಗುಂಡ: ಒಂದಾನೊಂದು ಕಾಲ, ಟೀಚರ್!

### ಸತ್ಯ ಹೇಳ್ತೀನಿ

ಜಡ್ಜ್: ನಿನ್ನ ಪರವಾದಿಸಲು ಲಾಯರ್ ಬೇಡವಾ?

ಆರೋಪಿ: ಬೇಡ ಸಾರ್, ನಾನು ಸತ್ಯವನ್ನೇ ಹೇಳಬೇಕೆಂದು ನಿರ್ಧರಿಸಿದ್ದೇನೆ.

### ಅಯ್ಯೋ ಅನಿಸಿತು!

ವಕೀಲ: ಗಂಡನಿಗೆ ಪಾಯಸದಲ್ಲಿ ವಿಷ ಬೆರೆಸಿ ಕೊಂದಿರಲ್ಲ. ಅವನ ಬಗ್ಗೆ ಅಯ್ಯೋ ಎನಿಸಲಿಲ್ಲವೇ?

ಆಪಾದಿತೆ: ಆಗಿತ್ತು ಸಾರ್, ಅವರು ಬಾಯಿ ಚಪ್ಪರಿಸಿ ಇನ್ನೊಂದು ಸೌಟು ಪಾಯಸ ಕೇಳಿದಾಗ!

(ಸಂಗ್ರಹ) ಕೆ. ಶ್ರೀನಿವಾಸರಾವ್
ಹರಪನಹಳ್ಳಿ


